ಶ್ರೀಮಲ್ಲಿಕಾರ್ಜುನಗೌಡ ಎಸ್. ಪಾಟೀಲ್.—ಇದು ಕೇಂದ್ರ ಸರ್ಕಾರದಡಿಯಲ್ಲಿ ಬರತಕ್ಕ ಕಾರ್ಖಾನೆ. ಆ ಕಾರ್ಖಾನೆಯಲ್ಲಿ ಕರ್ನಾಟಕದ ಜನರನ್ನು ನೌಕರಿ ಮೇಲೆ ತೆಗೆದುಕೊಳ್ಳುವುದಕ್ಕೆ ಸರ್ಕಾರ ಆದೇಶ ಕೊಟ್ಟಿದೆಯೇ ಎಂದರೆ ಇಲ್ಲವೆಂದು ಹೇಳಿದ್ದೀರಿ. ಕಾರ್ಖಾನೆಗೆ ಅನುಮತಿ ಕೊಡುವಾಗ ರೆಸ್ಟ್ರಿಕ್ಟ್ ಮಾಡದಿದ್ದರೆ ಹೊರಗಿನ ಜನರು ಅಲ್ಲಿ ನೌಕರಿ ಮಾಡುತ್ತಾರೆ. ಕರ್ನಾಟಕದ ಜನರನ್ನು ಅಲ್ಲಿ ನೌಕರಿಗೆ ತೆಗೆದುಕೊಳ್ಳುವಂತೆ ಆದೇಶ ಕೊಡುವುದಕ್ಕೆ ಸರ್ಕಾರಕ್ಕೆ ಏನು ತೊಂದರೆ ಇದೆ ? (ಇ) ಪ್ರಶ್ನೆಗೆ ಉತ್ತರವಾಗಿ ಈ ಘಟಕಕ್ಕೆ ಬೇಕಾದ ವಿದ್ಯುತ್ತನ್ನು ಒದಗಿಸಲಾಗುವುದೆಂ ಎಂದು ಹೇಳಿದ್ದೀರಿ. ಯಾವಾಗ ಒದಗಿಸುತ್ತೀರಿ ? ಹುಕ್ಕೇರಿ ತಾಲ್ಲೂಕಿಗೆ ೧೨ ಮೆಗಾವ್ಯಾಟ್ ವಿದ್ಯುತ್ ಬೇಡಿಕೆ ಇದ್ದರೂ ೭ ಮೆಗಾವ್ಯಾಟ್ ಕೊಡುತ್ತಿದ್ದೀರಿ. ಈ ಬೇಡಿಕೆಯನ್ನು ಯಾವಾಗ ಪೂರೈಸುತ್ತೀರಿ ? ಸಂಕೇಶ್ವರ ಮತದಾರರ ಕ್ಷೇತ್ರದಲ್ಲಿ ಕಾರ್ಖಾನೆ ಇರುವುದರಿಂದ ಅಲ್ಲಿರತಕ್ಕ ನಿರುದ್ಯೋಗಿ ಪದವೀಧರರಿಗೆ ಮಂತ್ರಿತರರನ್ನು ನೌಕರಿಮೇಲೆ ಕಡ್ಡಾಯವಾಗಿ ತೆಗೆದುಕೊಳ್ಳುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ? ಮಾನ್ಯ ಆರೋಗ್ಯ ಮಂತ್ರಿಗಳು ನಮ್ಮ ಗ್ರಾಮಕ್ಕೆ ಬಂದಾಗ ಸಂಕೇಶ್ವರ ಮತದಾರರ ಕ್ಷೇತ್ರದಲ್ಲಿ ಕಾರ್ಖಾನೆ ಇರುವುದರಿಂದ ಕರ್ನಾಟಕದ ಜನರನ್ನೇ ಹೆಚ್ಚಾಗಿ ಅಲ್ಲಿ ನೇಮಿಸಬೇಕೆಂದು ತಮ್ಮ ಭಾಷಣದಲ್ಲಿ ನೇರವಾಗಿ ಹೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನವೆಂಬರ್‌ನಲ್ಲಿ ಕಾರ್ಖಾನೆ ಪ್ರಾರಂಭವಾಗುತ್ತದೆಂದು ಹೇಳಿದ್ದೀರಿ. ಆ ವೇಳೆಗೆ ಕರ್ನಾಟಕದ ಜನರನ್ನು ಕಡ್ಡಾಯವಾಗಿ ಕಾರ್ಖಾನೆಯಲ್ಲಿ ನೇಮಿಸಿಕೊಳ್ಳುವಂತೆ ಮಾಡಲು ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಜೆ. ಹೆಚ್. ಪಟೇಲ್.—ಆ ರೀತಿ ಕಡ್ಡಾಯಗೊಳಿಸುವುದಕ್ಕೆ ನಮ್ಮ ಕಾನೂನಿನಲ್ಲಿ ಪ್ರಾವಿಷನ್ ಇಲ್ಲ. ಆದರೂ ಈ ಕಾರ್ಖಾನೆಯನ್ನು ನಡೆಸತಕ್ಕವರಿಗೆ ಇದರ ಬಗ್ಗೆ ಹೇಳಿದ್ದೇವೆ. ತಂತ್ರಜ್ಞರನ್ನು ಹೊರತುಪಡಿಸಿ ಬೇರೆ ಎಲ್ಲಾ ನೌಕರರನ್ನು ಕರ್ನಾಟಕದಿಂದ ತೆಗೆದುಕೊಳ್ಳಿ ಎಂದು ಒತ್ತಾಯ ಮಾಡಬಹುದು. ಕಾನೂನು ಪ್ರಕಾರ ಕ್ರಮ ತೆಗೆದುಕೊಂಡು ಕಾರ್ಖಾನೆ ನಿಲ್ಲಿಸುತ್ತೇವೆಂದು ಮಾಡುವುದಕ್ಕೆ ಸಾಧ್ಯವಿಲ್ಲ. ವಿದ್ಯುತ್ ಬೇಡಿಕೆ ಆ ಕಾರ್ಖಾನೆಯಿಂದ ಬಹಳ ಕಡಿಮೆ ಇದೆ.

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್.—ಹುಕ್ಕೇರಿ ತಾಲ್ಲೂಕಿನಲ್ಲಿ ೧೨ ಮೆಗಾವ್ಯಾಟ್ ಬೇಡಿಕೆ ಇದೆ. ಕಾರ್ಖಾನೆಗೆ ಎಷ್ಟು ಬೇಕು ಎಂದು ಗೊತ್ತಿಲ್ಲ.

ಶ್ರೀ ಜೆ. ಹೆಚ್. ಪಟೇಲ್.— ಹುಕ್ಕೇರಿ ತಾಲ್ಲೂಕಿನ ಬೇಡಿಕೆಗೂ ಕಾರ್ಖಾನೆಯ ಬೇಡಿಕೆಗೂ ವ್ಯತ್ಯಾಸ ಇದೆ. ಕಾರ್ಖಾನೆ ಬೇಡಿಕೆ ಬಹಳ ಕಡಿಮೆ ಇದೆ. ೧೯೮೬ರ ನವೆಂಬರ್‌ಗೆ ಉತ್ಪಾದನೆ ಕಾರ್ಯ ಪ್ರಾರಂಭವಾಗಬಹುದು. ಈಗ ಸಿವಿಲ್ ವರ್ಕ್ಸ್ ಪೂರ್ಣವಾಗಿದೆ. ಮೆಷಿನರಿ ತರಿಸುತ್ತಿದ್ದಾರೆ. ಅವರು ಹಾಕಿರತಕ್ಕ ಷೆಡ್ಯೂಲ್ ಪ್ರಕಾರ ೧೯೮೬ರ ನವೆಂಬರ್‌ನಲ್ಲಿ ಕಾರ್ಖಾನೆ ಪ್ರಾರಂಭವಾಗುತ್ತದೆ.

ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್.—ಕಾರ್ಖಾನೆಯ ಆಯ್ಕೆ ಸಮಿತಿಯಲ್ಲಿ ಸಂಬಂಧಪಟ್ಟ ಕ್ಷೇತ್ರದ ಶಾಸಕರನ್ನು ಹಾಕುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್.—ಆ ಬಗ್ಗೆ ವಿಚಾರ ಮಾಡುತ್ತೇನೆ.

ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪ ನಗರದಲ್ಲಿ ಕುಡಿಯುವ ನೀರಿನ ಅಭಿವೃದ್ಧಿ ಬಗ್ಗೆ

೨೯೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ನಗರಾಭಿವೃದ್ಧಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಶಿಕಾರಿಪುರ ತಾಲ್ಲೂಕ್ ಶಿರಾಳಕೊಪ್ಪ ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ ಕಳೆದ ಹತ್ತು ವರ್ಷಗಳಿಂದ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಿದ್ದಲ್ಲಿ ಕುಡಿಯುವ ನೀರಿನ ಸರಬರಾಜನ್ನು ಅಭಿವೃದ್ಧಿಪಡಿಸಲು ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿರುವ ಈ ಯೋಜನೆ ಈ ವರ್ಷವಾದರೂ ಕೈಗೊಳ್ಳಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಸಚಿವರು).—

(ಅ) ಕುಡಿಯುವ ನೀರಿನ ಕೊರತೆ ಇಲ್ಲ. ಆದರೆ ವಿತರಣಾ ವ್ಯವಸ್ಥೆ ಸಮಂಜಸವಾಗಿಲ್ಲ.

(ಆ) ಇಲ್ಲಿನ ಕುಡಿಯುವ ನೀರಿನ ವಿತರಣೆಯ ಸಮಸ್ಯೆಯನ್ನು ಬಗೆಹರಿಸಲು ಜಲಮಂಡಲಿಯು ೧೭.೦೦ ಲಕ್ಷ ರೂ. ಗಳ ಅಂದಾಜನ್ನು ತಯಾರಿಸಿದ್ದು ಇದರ ಕಾರ್ಯವನ್ನು ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಸೌಲಭ್ಯ ಮಾಡಿಕೊಡುವುದಕ್ಕೆ ಸರ್ಕಾರಕ್ಕೆ ಅವಕಾಶ ಇದೆಯೇ ಎಂದು ಕೇಳಿದ್ದೆ. ಅಲ್ಲಿ ನೀರಿನ ಸಮಸ್ಯೆ ಇದೆ. ಕಳೆದ ಮೂರು ವರ್ಷಗಳಿಂದ ಅಲ್ಲಿಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸರ್ಕಾರ ಮಾಹಿತಿಗಳನ್ನು ಒದಗಿಸಿ ಕೊಡಬೇಕು ಈಗ ನಿಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ ಈ ಬಜೆಟ್‌ನಲ್ಲಾದರೂ ಸೇರಿಸಿ ಈ ಕೆಲಸವನ್ನು ಮಾಡಿಕೊಡಬೇಕು. ಅಲ್ಲಿರುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮಿಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಮಂತ್ರಿಗಳ ಈ ಪ್ರಯತ್ನಕ್ಕೆ ಒಂದು ವರ್ಷವಾಗುತ್ತದೆ. ಕೊನೆಯ ಪಕ್ಷ ಈ ಸದನದಲ್ಲಿ ಈ ವರ್ಷ ಮಾಡಿಕೊಡುತ್ತೇವೆ ಎಂದರೆ ಜನರಿಗೆ ಸಮಾಧಾನ ವಾಗುತ್ತದೆ. ಹೋದ ವರ್ಷ ಇದೇ ಪ್ರಶ್ನೆಯನ್ನು ಈ ಸದನದಲ್ಲಿ ಎತ್ತಿದ್ದೆ. ಅವಶ್ಯಕತೆ ಇರುವುದರಿಂದ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇಲ್ಲದಿದ್ದರೆ ಪ್ರಶ್ನೆಯನ್ನೇ ಕೇಳುವ ಅಗತ್ಯವಿರಲಿಲ್ಲ. ಈ ವರ್ಷ ಆದರೂ ಮಾಡುತ್ತೇವೆ ಎಂದು ಹೇಳಿದರೆ ಸಂತೋಷವಾಗುತ್ತದೆ.

ಶ್ರೀ ಎ. ಲಕ್ಷ್ಮಿಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ನೀರು ಸರಬರಾಜು ಮಂಡಳಿ ಇದೆ. ಅದು ಕಾನೂನು ಅಸ್ತಿತ್ವದಲ್ಲಿ ಜಾರಿಯಲ್ಲಿರತಕ್ಕಂಥ ಸಂಸ್ಥೆ. ಇದನ್ನು ಈ ವರ್ಷ ಕಾರ್ಯಗತ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಅವರ ತೀರ್ಮಾನವನ್ನು ಇನ್‌ಫ್ಲುಯೆನ್ಸ್ ಮಾಡುವುದಕ್ಕೆ ನನಗೆ ಅಧಿಕಾರ ಇಲ್ಲ. ಅವರನ್ನು ಖಾಸಗಿಯಾಗಿ ಕರೆದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾವು ನಮ್ಮ ವ್ಯವಸ್ಥೆಗೋಸ್ಕರ ಬಹಳಷ್ಟು ಮಂಡಳಿಗಳನ್ನು ಮಾಡಿಕೊಂಡಿದ್ದೇವೆ. ಅಲ್ಲಿ ಕೆಲಸ ಆಗದಿದ್ದರೆ ನಾನು ಸನ್ಮಾನ್ಯ ಮಂತ್ರಿಗಳ ಮೂಲಕ ಕೆಲಸವನ್ನು ಮಾಡಿಸಿಕೊಳ್ಳಬೇಕಾಗುತ್ತದೆ. ಮಂಡಳಿಯವರು ಮಾಡುತ್ತಾರೆ ಎಂದು ನೀವು ಹೇಳುವುದಾದರೆ ನಿಮ್ಮನ್ನು ಕೇಳುವ ಅಗತ್ಯ ಏನೂ ಇರಲಿಲ್ಲ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ಅವರ ಪಕ್ಕದಲ್ಲಿ ಕುಳಿತಂ ಕೈ ಹಿಡಿದು ಮಾಡಿಸಿ ಕೊಳ್ಳಿರಿ.

ಬೈಂದೂರಿನ ಬಳಿ ಬಾಕ್ಸೈಟ್ ಆಧಾರಿತ ಉದ್ದಿಮೆ ಸ್ಥಾಪನೆಯ ಬಗ್ಗೆ

೪೬೦. ಜಿ. ಎಸ್. ಆಚಾರ್ (ಬೈಂದೂರು).— ಮಾನ್ಯ ವಿದ್ಯುಚ್ಛಕ್ತಿ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ದೊರೆಯಬಹುದಾದ ವಿಫಲವಾದ ಬಾಕ್ಸೈಟ್ ಅದಿರಿನ ಆಧಾರದ ಮೇಲೆ ಸರ್ಕಾರದವರು ಸ್ಥಳೀಯ ಕೈಗಾರಿಕೆಗಳೇನಾದರೂ ಸ್ಥಾಪಿಸಲು ಉದ್ದೇಶವಿದೆಯೇ ?

ಶ್ರೀ ಜಿ. ಎಸ್. ದೇಶಮುಖ್ (ವಿದ್ಯುಚ್ಛಕ್ತಿ ಮತ್ತು ಗಣಿ ಮತ್ತು ಭೂ ವಿಜ್ಞಾನ ಸಚಿವರು).—

(ಅ) ಇಲ್ಲ.